ಇ) ಈ ಬಾಕಿ ಹಣ ಬರಲು ಎಷ್ಟೊಂದು ವಿಳಂಬಕ್ಕೆ ಕಾರಣಗಳೇನು; ಇದು ಯಾವ ಅವಧಿಯದು; ಇದಕ್ಕೆ ಇದ್ದ ಅಡೆ–ತಡೆಗಳೇನು; (ವಿವರ ನೀಡುವುದು)?

ಮಾನ್ಯ ಶ್ರೀ ಆರ್.ರಾಮಲಿಂಗಾರೆಡ್ಡಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

ಅ) ಇಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ. ಆದರೆ ಇಲಾಖೆಯಿಂದ ಹಣ ಬಿಡುಗಡೆಗೆ ಸಂಬಂಧಿಸಿದಂತೆ 2004–05ನೇ ಸಾಲಿನಲ್ಲಿ ಯೋಜನೆಯಡಿ ಮುಂದುವರೆಸುತ್ತಿರುವ ಒ.ಬಿ.ಬಿ. ಡಿ.ಪಿ.ಇ.ಪಿ. ಸರ್ಕಾರಿ ಪ್ರಾಥಮಿಕ ಪ್ರೌಢ ಮತ್ತು ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರುಗಳು ಕೊರತೆ ವೇತನವನ್ನು ಭರಿಸಲು ಯೋಜನೆಯಡಿ ರೂ.5727.00 ಲಕ್ಷಗಳ ಮೊತ್ತವನ್ನು ಹೆಚ್ಚುವರಿಯಾಗಿ ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಲಾಗಿದೆ. ಸದರಿ ಮೊತ್ತವನ್ನು ವೇತನ ಬಾಬ್ತುಗಳಿಗೆ ಭರಿಸಲಾಗಿದೆ.

ಈ ಕೆಳಕಂಡಂತೆ ಹೆಚ್ಚುವರಿ ಅನುದಾನವನ್ನು ಸಂಬಳ ಪಾವತಿಗಾಗಿ ಮಾತ್ರ ಬಿಡುಗಡೆ ಮಾಡಿರುತ್ತದೆ.

(ಲಕ್ಷಗಳಲ್ಲಿ)

ಪ್ರಾಥಮಿಕ		ಪ್ರೌಢ ಶಿಕ್ಷಣ	
ಯೋಜನೆ	ಯೋಜನೇತರ	ಯೋಜನೆ	ಯೋಜನೇತರ
799.88	2866.99	1848.21	4927.11

ಇ) 2004–05ನೇ ಸಾಲಿನಲ್ಲಿ ಯೋಜನೇತರ ಜಿಲ್ಲಾವಲಯ ಕಾರ್ಯಕ್ರಮಗಳಡಿಯಲ್ಲಿ ಕಡಿಮೆ ಆಯವ್ಯಯ ನಿಗದಿಯಾಗಿದ್ದರಿಂದ ವೇತನಗಳಿಗಾಗಿ ಹೆಚ್ಚುವರಿ ಹಣ ಬಿಡುಗಡೆ ಮಾಡಲಾಗಿದೆ.

3681(4733); ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ);

ಮಾನ್ಯ ಶ್ರೀ ಆರ್.ರಾಮಲಿಂಗಾರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು); ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ಹೊಸನಗರ ತಾಲ್ಲೂಕಿನಲ್ಲಿ ಈ ಶೈಕ್ಷಣಿಕ ಸಾಲಿನಲ್ಲಿ ಪದವಿ ಪೂರ್ವ ಕಾಲೇಜು ಸ್ಥಾಪನೆಗೆ ಬೇಡಿಕೆ ಸರ್ಕಾರಕ್ಕೆ ಬಂದಿದೆಯೇ;

ಆ) ಮಾಸ್ತಿಕಟ್ಟೆಯಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಯಾವ ಯಾವ ಹುದ್ದೆಗಳು ಖಾಲಿ ಇವೆ; ಯಾವಾಗಿನಿಂದ ಖಾಲಿ ಇವೆ;

ಇ) ಈ ಹುದ್ದೆಗಳನ್ನು ಯಾವಾಗ ತುಂಬಲಾಗುವುದು?

ಶ್ರೀ ಆರ್.ರಾಮಲಿಂಗಾರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)

ಅ) ಹೌದು. ಬೇಡಿಕೆ ಬಂದಿರುತ್ತದೆ.

ಆ)

ಖಾಲಿ ಇರುವ ಉಪನ್ಯಾಸಕರ ಹುದ್ದೆಗಳು	ಯಾವ ದಿನಾಂಕದಿಂದ ಖಾಲಿ ಇರುತ್ತದೆ.
01. ಕನ್ನಡ	01.07.2000
02. ರಾಜ್ಯಶಾಸ್ತ್ರ	01.07.2000
03. ಸಮಾಜಶಾಸ್ತ್ರ	31.05.2005

ಇ) ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ಭರ್ತಿಮಾಡುವ ಪ್ರಕ್ರಿಯೆ ಪ್ರಾರಂಭಿಸಲಾಗಿದೆ. ಸದ್ಯಕ್ಕೆ ಕಡಿಮೆ ಕಾರ್ಯಭಾರವಿರುವ ಉಪನ್ಯಾಸಕರನ್ನು ವಾರದಲ್ಲಿ 3 ದಿನ ನಿಯೋಜಿಸುವ ಮೂಲಕ ಭೋಧನಾ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ.

3682(4332); ಶ್ರೀ ಅಶೋಕ.ಆರ್.(ಉತ್ತರಹಳ್ಳಿ) ಮತ್ತು ಶ್ರೀ ಪಿ.ಸಿ.ಮೋಹನ್ (ಚಿಕ್ಕಪೇಟೆ); ಮಾನ್ಯ ಶ್ರೀ ಆರ್.ರಾಮಲಿಂಗಾರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು); ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ಪ್ರತಿವರ್ಷದಂತೆ ಶಾಲಾ ಮಕ್ಕಳಿಗೆ ಈ ವರ್ಷವೂ ಉಚಿತ ಶಾಲಾ ಸಮವಸ್ತ್ರ ನೀಡಲು ಸರ್ಕಾರ ಉದ್ದೇಶಿಸಿದೆಯೇ;

ಆ) ಉದ್ದೇಶಿಸಿದಲ್ಲಿ ಯಾವಾಗ ಸಮವಸ್ತ್ರ ವಿತರಿಸಲಾಗುವುದು, ಸಮಯಕ್ಕೆ ಸರಿಯಾಗಿ ಸಮವಸ್ತ್ರರ ವಿತರಣೆಯಲ್ಲಿ ವಿಳಂಬವಾಗಲು ಕಾರಣವೇನು;

ಇ) ಇಲಾಖೆಯ ಅಧಿಕಾರಿಗಳ ನಿರ್ಲಕ್ಷತನ ಅಥವಾ ಕೈಮಗ್ಗ ಅಭಿವೃದ್ಧಿ ನಿಗಮ ಬಟ್ಟೆ ಪೂರೈಸಲು ಹಿಂದೇಟು ಹಾಕಿದೆಯೇ;

ಈ) ನಿಗಮವು ಹಿಂದೇಟು ಹಾಕಲು ಕಾರಣವೇನು; ಹಿಂದಿನ ವರ್ಷದ ಬಟ್ಟೆಗಳ ಬಾಕಿ ಹಣವನ್ನೇನಾದರೂ ಪಾವತಿಸಬೇಕಾಗಿದೆಯೇ;

ಉ) ಇದರಿಂದ ಇಲಾಖೆಗೆ ಬರುವ ಖರ್ಚಿಷ್ಟು ನಿಗಮಕ್ಕೆ ಬರುವ ಲಾಭವೆಷ್ಟು?

ಶ್ರೀ ಆರ್.ರಾಮಲಿಂಗಾರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಉದ್ದೇಶಿಸಿ ಅನುಷ್ಠಾನಗೊಳಿಸಲಾಗಿದೆ.